**ದಿಃ 24-01-2026** ರಂದು ಸಾಕ್ಷಿಯನ್ನು **ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ**

(1 ಮತ್ತು 2 ನೇ ಎದುರುದಾರರ ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀಮತಿ ಎ ಎಸ್ ಡಿ ವಕೀಲರಿಂದಃ**

ಅಪಘಾತವಾದ ಸಮಯದಲ್ಲಿ ನಾನು ಮೋಟರ ಸೈಕಲ ಮೇಲೆ ಹೋಗುತ್ತಿದ್ದೆ. ನಾವು ಕಲಘಟಗಿಯಿಂದ ಧಾರವಾಡಕ್ಕೆ ಕೆಲಸಕ್ಕೆ ಹೋರಟಿದ್ದೆವು. ನಾವು ರಸ್ತೆ ಪಕ್ಕದಲ್ಲಿ ಹೋಗುತ್ತಿದ್ದೆವು. ಲಾರಿ ಚಾಲಕ ವೇಗಾಗಿ ಬಂದು ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಅಂದರೆ ನಿಜ. ಅಪಘಾತವು ಮೋಟರ ಸೈಕಲ ಸವಾರನಿಂದ ಆಗಿಲ್ಲ ಅಂದರೆ ನಿಜ. ನಾನು ಹೋಗುತ್ತಿದ್ದ ಮೋಟರ ಸೈಕಲ ಸವಾರನಿಗೆ ವಾಹನ ಚಾಲನಾ ಪರವಾನಿಗೆ ಹಾಗೂ ವಾಹನದ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ.

ಅಪಘಾತವಾದ ನಂತರ ನನ್ನನ್ನು ಕಲಘಟಗಿ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಅಲ್ಲಿಂದ ಸುಚಿರಾಯು ಆಸ್ಪತ್ರೆ ಹುಬ್ಬಳ್ಳಿಗೆ ದಾಖಲಿಸಿರುತ್ತಾರೆ. ನಂತರ ಎಸ್ ಡಿ ಎಂ ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೇನೆ. ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ಎಸ್ ಡಿ ಎಂ ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ದಿನಾಂಕ 07.03.2024 ರಂದು ಎಸ್ ಡಿ ಎಂ ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದು ಮುಂದಿನ ಚಿಕಿತ್ಸೆಗಾಗಿ ದಿನಾಂಕ 07.09.2024 ರಂದು ಬರುವಂತೆ ತಿಳಿಸಿದ್ದು ನಾನು ಹೆಚ್ಚುವರಿ ಚಿಕಿತ್ಸೆ ಪಡೆದಿಲ್ಲ ಅಂದರೆ ಸರಿಯಲ್ಲ. ನಾನು ಹೆಚ್ಚುವರಿಯಾಗಿ ಎಸ್ ಡಿ ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳು ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಹಾಜರ ಪಡಿಸಿದ ಔಷದಿ ಚೀಟಿಗಳು ಹಾಗೂ ಬಿಲ್ಲುಗಳಿಗೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಅವುಗಳನ್ನು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ.

ನಾನು ಧಾರವಾಡದ ಶ್ರಿರಾಮ ಪೈನಾನ್ಸನಲ್ಲಿ ಲಿಗಲ್ ಎಗ್ಜಕ್ಯೂಟೀವ್ ಎಂದು ಕೆಲಸ ಮಾಡುತ್ತಿದ್ದೆ. ಯಾವುದೆ ಖಾಸಗಿ ಕಂಪನಿಗೆ ಕೆಲಸಕ್ಕೆ ಹಾಜರಾದಾಗ ಆಫ್‌ರ ಲೇಟರ ಮತ್ತು 6 ತಿಂಗಳ ನಂತರ ಕನರ್ಫಮೇಷನ್ ಲೇಟರ ಕೊಡುತ್ತಾರೆ ಅಂದರೆ ನಿಜ. ನಾನು ಈ ಬಗ್ಗೆ ಯಾವುದೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನನ್ನು ಕೆಲಸಕ್ಕೆ ನೇಮಿಸಿದ ಬಗ್ಗೆ ಹಾಗೂ ನನ್ನ ಸೇವೆಯನ್ನು ಖಾಯಂಗೋಳಿಸಿದ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿ ಹಾಜರ ಪಡಿಸುತ್ತೇನೆ ಎನ್ನುತ್ತಾರೆ. ಎಪ್ರೀಲ್ 2024 ರ ವೇತನ ಪಾವತಿ ಹಾಜರ ಪಡಿಸಿದ್ದು ಅದರ ಹಿಂದಿನ ದಾಖಲೆ ಹಾಜರ ಪಡಿಸಿಲ್ಲ ಆದರೆ ನನ್ನ

ಹತ್ತಿರ ಇರುತ್ತವೆ. ನನ್ನ ವೇತನ ರಶೀದಿಯಲ್ಲಿ ನಮೂದಿಸಿದ other allowance ಯಾವುದರ ಬಗ್ಗೆ ನೀಡುತ್ತಾರೆ ಎನ್ನುವದು ಗೊತ್ತಿಲ್ಲ. ಅದು ಖಚೀತವಾಗಿ ಇರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಕೊಡುತ್ತಿದ್ದರು ಹಾಗೂ ಎಷ್ಟು ಕೊಡುತ್ತಿದ್ದರು ಎನ್ನುವದರ ಬಗ್ಗೆ ಸ್ಪಷ್ಟ ಇಲ್ಲ ಅಂದರೆ ಸರಿಯಲ್ಲ. ನಿಪಿ-8 ರಲ್ಲಿ ನಮೂದಿಸಿದ allowance ಮತ್ತು other allowance ಇವು ಯಾವುದಕ್ಕೆ ಸೇರಿದ್ದವು ಎಂದು ಸ್ಪಷ್ಟವಾಗಿ ನಮೂದಿಸಿಲ್ಲ ಅಂದರೆ ಸರಿಯಲ್ಲ. ಸದರಿಯವುಗಳ ಬಗ್ಗೆ ನಿರ್ದಿಷ್ಟತೆ ಹಾಗೂ ಸ್ಪಷ್ಟತೆ ಇರುವುದಿಲ್ಲ ಅಂದರೆ ಸಾಕ್ಷಿ ನಮ್ಮ ಕಾರ್ಯವೈಕರಿಯನ್ನು ಪರಿಗಣಿಸಿ ನೀಡುತ್ತಿದ್ದರು ಎನ್ನುತ್ತಾರೆ. ನಮ್ಮ ಕಾರ್ಯವೈಕರಿ ಮೇಲೆ ಹೆಚ್ಚು ಕಡಿಮೆ ಆಗಬಹುದು. ನನ್ನ ಕಾರ್ಯವೈಕರಿ ಉತ್ತಮವಾಗಿತ್ತು ಎಂದು ತೋರಿಸಲು ದಾಖಲೆ ಹಾಜರ ಪಡಿಸಿಲ್ಲ. ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ.

ಅಪಘಾತದಲ್ಲಿ ನಾನು ಬಲ ತೊಡೆಯ ಮೂಳೆ ಮುರಿತವಾಗಿದ್ದು ನನಗೆ ಮಾದಲಿನಂತೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-8 ನ್ನು ಹೊರತು ಪಡಿಸಿ ನನಗೆ ತಿಂಗಳಿಗೆ 30 ಸಾವಿರ ಸಂಬಳ ಇತ್ತು ಎನ್ನುವ ಬಗ್ಗೆ ದಾಖಲೆ ಇಲ್ಲ ಅಂದರೆ ಸರಿಯಲ್ಲ. ನನ್ನ ಸಂಬಳ ಪ್ರತಿ ತಿಂಗಳು ಬ್ಯಾಂಕ ಖಾತೆಗೆ ಜಮಾ ಆಗುತ್ತಿತ್ತು ಈ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ಅಪಘಾತದಿಂದಾಗಿ ನಾನು ಮಾಡುತ್ತಿದ್ದ ಕೆಲಸಕ್ಕೆ ಯಾವುದೆ ತೊಂದರೆ ಇಲ್ಲ ಅಂದರೆ ಸಾಕ್ಷಿ ನನ್ನ ಕೆಲಸ ಹೋಗಿರುತ್ತದೆ ಅನ್ನುತ್ತಾರೆ. ನನ್ನನ್ನು ಕೆಲಸದಿಂದ ತೆಗೆದು ಹಾಕಿದ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುವುದರಿಂದ 4 ನೇ ಎದುರುದಾರರ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**